**ಸಾಕ್ಷಿಯನ್ನು ದಿಃ 18.08.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಗೌರಮ್ಮ ರವರಿಗೆ 5 ಜನ ಮಕ್ಕಳು. ಸ್ವಾಮಿ ಹಾಗೂ ಧರ್ಮ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಸುನಂದಮ್ಮ, ಮಂಜುಳ, ಲತಾ ಎಂಬ ಮೂವರು ಹೆಣ್ಣುಮಕ್ಕಳು.

2. ಗೌರಮ್ಮ, ಅವರ ಮಗ ಧರ್ಮಪ್ಪ ಹಾಗೂ ಉಳಿಕೆ ಮಕ್ಕಳ ನಡುವೆ ಕುಟುಂಬದ ಆಸ್ತಿ ಸಂಬಂಧ ದಾವೆ ಇದೆ ಎಂದರೆ ಸರಿ. ಆ ದಾವೆಯಲ್ಲಿ ನೀವು ಗೌರಮ್ಮ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೀರಾ? ಎಂದರೆ ಬಂದಿಲ್ಲ.

3. ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ 8 ನೇ ನಂಬರ್ ನಿವೇಶನ, ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ 4 ನೇ ನಂಬರ್ ನಿವೇಶನ, ಬೋರೆ ಹೊಸಳ್ಳಿ ಗ್ರಾಮದ ಸದರಿ ಚಕ್ಕುಬಂದಿಯ ನಡುವೆ ಇರುವ ನಿವೇಶನಕ್ಕೆ ವ್ಯಾಜ್ಯ ನಡಿತಿದೆಯಾ ಎಂದರೆ, ನಡೆಯುತ್ತಿದೆ ಎಂದು ನುಡಿಯುತ್ತಾರೆ. ಸದರಿ ಚಕ್ಕುಬಂದಿಯಲ್ಲಿನ ನಿವೇಶನ ಗೌರಮ್ಮ ನವರಿಗೆ ಸೇರಿರುತ್ತದೆ. ಸದರಿ ಆಸ್ತಿ ಪೂರ್ವ ಪಶ್ಚಿಮ 40 ಅಡಿ, ದಕ್ಷಿಣ ಉತ್ತರ 30 ಅಡಿ ಅಳತೆ ಇದೆಯಾ ಎಂದರೆ, ಹೌದು.

4. 5 ನೇ ಪ್ರೇಮಾ ರವರ ಪತಿಯ ಹೆಸರು ಸೋಮನಾಯಕ ಎಂದರೆ ಸರಿ. ಸೋಮನಾಯಕನ ತಂದೆ ಹೆಸರು ತಮ್ಮನಾಯಕ ಎಂದರೆ ಸರಿ.

5. ಸೋಮನಾಯಕರಿಗೆ ಬೋರೆ ಹೊಸಳ್ಳಿ ಗ್ರಾಮದಲ್ಲಿ ಸರ್ಕಾರದವರು ವಸತಿ ಯೋಜನೆಯಡಿ 9 ನೇ ನಂಬರಿನ ನಿವೇಶನ ನೀಡಿದ್ದಾರೆ ಎಂದರೆ ಸರಿ.

6. ಪ್ರೇಮಾ, ಅವರ ಪತಿ ಹಾಗೂ ಕುಟುಂಬದವರು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದವರು ಎಂದರೆ ಸರಿ.

7. ಸೋಮನಾಯಕರು ಈಗ ಮೃಪಟ್ಟಿದ್ದಾರೆ ಎಂದರೆ ಸರಿ. ಅವರು ಬದುಕಿದ್ದಾಗ 9 ನೇ ನಂಬರಿನ ನಿವೇಶನದ ಪಂಚಾಯತಿ ದಾಖಲೆಗಳು ಅವರ ಹೆಸರಿನಲ್ಲಿ ಇತ್ತು ಎಂದರೆ ಸರಿ.

8. ಅವರ ಮರಣಾ ನಂತರ 9 ನೇ ನಂಬರಿನ ನಿವೇಶನದ ಪಂಚಾಯತಿ ಖಾತೆ ಪ್ರೇಮಾ ರವರ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ, ಸ್ವಾಮಿ ರವರು ಗೌರಮ್ಮ ನವರಿಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

9. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿಮ್ಮ ಮತ್ತು ನಿಮ್ಮ ಕುಟುಂಬದ ಸದಸ್ಯ ನಡುವೆ ಹಲವಾರು ದಾವೆಗಳು ಈ ನ್ಯಾಯಾಲಯ ಹಾಗೂ ಹಿರಿಯ ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ಅವುಗಳಲ್ಲಿ ನಾನು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ.

10. ಪ್ರೇಮಾ ರವರ ಹೆಸನರಿಲ್ಲಿ ಖಾತೆ ಇದೆ ಎಂದರೆ, ನನಗೆ ಗೊತ್ತಿಲ್ಲ.

11. ಗೌರಮ್ಮನ ಮಗ ಸ್ವಾಮಿ ರವರು ಹಾಗೂ ನೀವು ಸ್ನೇಹಿತರು ಎಂದರೆ ಸರಿ. ಸದರಿಯವರ ಜಮೀನಿನ ಅಕ್ಕಪಕ್ಕ ನಿಮ್ಮ ಕುಟುಂಬಕ್ಕೆ ಹಲವಾರು ಜಮೀನು ಇವೆ ಎಂದರೆ, ತೋಟ ಇದೆ, ಜಮೀನು ಇಲ್ಲ ಎಂದು ನುಡಿಯುತ್ತಾರೆ.

12. ಸ್ನೇಹಿತರಾದ್ದರಿಂದ ಈ ದಾವೆಗೆ ಸಂಬಂಧಪಟ್ಟಂತೆ ಸ್ವಾಮಿ ರವರು ನಿಮಗೆ ಆಗಾಗ ಮಾಹಿತಿ ನೀಡುತ್ತಿದ್ದರಾ ಎಂದರೆ, ಹೌದು. ಸದರಿಯವರು ನೀಡಿದ ಮಾಹಿತಿ ಆಧಾರದ ಮೇಲೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಿದ್ದಪಡಿಸಲಾಗಿದೆ ಎಂದರೆ, ಸರಿ.

13. ನಿಮಗೆ ಹಾಗೂ 5 ನೇ ಪ್ರತಿವಾದಿಗಳಿಗೆ ಮೊದಲಿನಿಂದಲೂ ದ್ವೇಷ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಅವರಿಗೆ ತೊಂದರೆಯಾಗಲಿ ಎಂದು ನ್ಯಾಯಾಲಯದ ಮುಂದೆ ಸ್ವಾಮಿ ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ